# CCE PR

ಸಂಕೇತ ಸಂಖ್ಯೆ : **85-K** ವಿಷಯ : ಸಮಾಜ ವಿಜ್ಞಾನ

**Code No. : 85-K** **Subject : SOCIAL SCIENCE**

**(ಕನ್ನಡ ಭಾಷಾಂತರ / Kannada Version)**

**(ಹೊಸ ಪಠ್ಯಕ್ರಮ / New Syllabus)**

**(ಪುನರಾವರ್ತಿತ ಖಾಸಗಿ ಅಭ್ಯರ್ಥಿ / Private Repeater)**

*ಸಾಮಾನ್ಯ ಸೂಚನೆಗಳು :*

i) ಈ ಪ್ರಶ್ನೋತ್ತರ ಕಿರುಪುಸ್ತಕವು ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಒಟ್ಟು 57 ಪ್ರಶ್ನೆಗಳನ್ನು ಹೊಂದಿದೆ.

ii) ಪ್ರತಿಯೊಂದು ವಸ್ತುನಿಷ್ಠ ಮಾದರಿ ಪ್ರಶ್ನೆಯ ಉತ್ತರಕ್ಕಾಗಿ ಜಾಗವನ್ನು ನೀಡಲಾಗಿದೆ. ಸರಿಯಾದ ಉತ್ತರವನ್ನು ಆರಿಸಿ, ಕೊಟ್ಟಿರುವ ಜಾಗದಲ್ಲಿ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ.

iii) ವಿಷಯನಿಷ್ಠ ಮಾದರಿ ಪ್ರಶ್ನೆಗಳ ಉತ್ತರಗಳಿಗೆ ಸಾಕಷ್ಟು ಜಾಗವನ್ನು ನೀಡಲಾಗಿದೆ. ಉತ್ತರಗಳನ್ನು ಆಯಾ ಜಾಗಗಳಲ್ಲಿಯೇ ಬರೆಯಿರಿ.

iv) ವಸ್ತುನಿಷ್ಠ ಮಾದರಿ ಮತ್ತು ವಿಷಯನಿಷ್ಠ ಮಾದರಿ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಅನುಸರಿಸಿ.

v) ವಿದ್ಯಾರ್ಥಿಗಳು ಸೀಸದ ಕಡ್ಡಿ (ಪೆನ್ಸಿಲ್) ಯಿಂದ ಉತ್ತರಗಳನ್ನು ಬರೆಯಬಾರದು. ಪೆನ್ಸಿಲ್‌ನಿಂದ ಉತ್ತರ ಬರೆದಲ್ಲಿ ಮೌಲ್ಯಮಾಪನಕ್ಕೆ ಪರಿಗಣಿಸಲಾಗುವುದಿಲ್ಲ. (ನಕ್ಷೆಗಳು, ರೇಖಾಚಿತ್ರಗಳು ಮತ್ತು ಭೂಪಟಗಳನ್ನು ಬಿಟ್ಟು).

vi) ಬಹು–ಆಯ್ಕೆ, ಹೊಂದಿಸಿ ಬರೆಯುವ ಪ್ರಶ್ನೆಗಳ ವಿಷಯದಲ್ಲಿ ಕೆರೆದು ಅಳಿಸುವುದು / ತಿದ್ದಿ ಬರೆಯುವುದು / ಗುರುತಿಸುವುದು ಮಾಡಿದಲ್ಲಿ ಮೌಲ್ಯಮಾಪನಕ್ಕೆ ಅನರ್ಹವಾಗುತ್ತದೆ.

vii) ಪ್ರಶ್ನೆ ಪತ್ರಿಕೆಯನ್ನು ಓದಲು 15 ನಿಮಿಷಗಳ ಹೆಚ್ಚಿನ ಕಾಲಾವಕಾಶ ನೀಡಲಾಗಿದೆ.

viii) ನಿಮ್ಮ ಪ್ರಶ್ನೋತ್ತರ ಕಿರುಪುಸ್ತಕದ ಬಲಭಾಗದಲ್ಲಿರುವ ಗೆರೆಯ ಪಕ್ಕದ ಖಾಲಿ ಜಾಗದಲ್ಲಿ ಯಾವುದೇ ರೀತಿಯ ಬರಹಗಳನ್ನು ಬರೆಯಬಾರದು.

I. ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಉತ್ತರಕ್ಕೆ ಕೊಟ್ಟಿರುವ ಜಾಗದಲ್ಲಿಯೇ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ : $10 \times 1 = 10$

1. **A ಪಟ್ಟಿ**ಯಲ್ಲಿ ಕೊಟ್ಟಿರುವ ವ್ಯಕ್ತಿಗಳನ್ನು ಅವರಿಗೆ ಸಂಬಂಧಪಟ್ಟ **B ಪಟ್ಟಿ**ಯಲ್ಲಿ ನೀಡಿರುವ ವಿಷಯಗಳೊಂದಿಗೆ ಹೊಂದಿಸಿ ಸೂಕ್ತ ಉತ್ತರಗಳನ್ನು ಕೊಟ್ಟಿರುವ ಸಂಕೇತಗಳಿಂದ ಆರಿಸಿ, ಬರೆಯಿರಿ :

| ***A ಪಟ್ಟಿ*** | ***B ಪಟ್ಟಿ*** |
|---|---|
| (a) ಫಜಲ್ ಅಲಿ | (i) ಸಂಸ್ಥಾನಗಳ ವಿಲೀನ |
| (b) ಷೇಕ್ ಅಬ್ದುಲ್ಲಾ | (ii) ಪ್ರಥಮ ರಾಷ್ಟ್ರಾಧ್ಯಕ್ಷರು |
| (c) ಡಾ॥ ಬಾಬು ರಾಜೇಂದ್ರ ಪ್ರಸಾದ್ | (iii) ರಾಜ್ಯ ಪುನರ್‌ವಿಂಗಡಣಾ ಆಯೋಗ |
| (d) ಸರ್ದಾರ್ ವಲ್ಲಭಭಾಯಿ ಪಟೇಲ್ | (iv) ನ್ಯಾಷನಲ್ ಕಾನ್ಫರೆನ್ಸ್ ಪಕ್ಷ |

| | ***a*** | ***b*** | ***c*** | ***d*** |
|---|---|---|---|---|
| (A) | i | iii | iv | ii |
| (B) | iv | i | iii | ii |
| (C) | ii | i | iv | iii |
| (D) | iii | iv | ii | i |

2. ಚೀನಾದಲ್ಲಿ ನಡೆದ ಈ ಘಟನೆಯನ್ನು ಜಗತ್ತಿನ ಮಿಲಿಟರಿ ಕಾರ್ಯವ್ಯೂಹದಲ್ಲಿಯೇ ಅತ್ಯಂತ ವಿಶಿಷ್ಟವಾದ ಪ್ರಯೋಗ ಎಂದು ಪರಿಗಣಿಸಲಾಗಿದೆ

   (A) ಕಮ್ಯೂನಿಸ್ಟರ ದೀರ್ಘಪಯಣ (B) ಮುನ್ನಡೆಯ ಮಹಾಜಿಗಿತ

   (C) ಸಾಂಸ್ಕೃತಿಕ ಕ್ರಾಂತಿ (D) ಪ್ರಜಾಪ್ರಭುತ್ವಕ್ಕಾಗಿ ನಡೆದ ಕ್ರಾಂತಿ

3. ಭಾರತವು ಅಲಿಪ್ತ ವಿದೇಶಾಂಗ ನೀತಿಯನ್ನು ಅನುಸರಿಸಿತು. ಇದರ ಅರ್ಥವೇನೆಂದರೆ : ಭಾರತವು

   (A) ಅಮೆರಿಕಾದ ಬಣವನ್ನು ಸೇರಿತು

   (B) ಅಮೆರಿಕಾ ಮತ್ತು ರಷ್ಯಾಗಳ ಬಣಗಳಿಂದ ಸಮಾನ ಅಂತರ ಕಾಪಾಡಿತು

   (C) ರಷ್ಯಾದ ಬಣವನ್ನು ಸೇರಿತು

   (D) ವಿಸ್ತರಣಾವಾದಿ ನೀತಿಯನ್ನು ಅನುಸರಿಸಿತು

4. ವಿಶ್ವಸಂಸ್ಥೆಯ ಈ ಅಂಗಸಂಸ್ಥೆಯನ್ನು ಜಾಗತಿಕ ಸಂಸತ್ತು ಎಂದು ಕರೆಯಲಾಗಿದೆ

   (A) ಸಚಿವಾಲಯ (B) ಭದ್ರತಾ ಸಮಿತಿ

   (C) ಸಾಮಾನ್ಯ ಸಭೆ (D) ದತ್ತಿ ಸಮಿತಿ

5. ಭಾರತ ಸಂವಿಧಾನದ 24ನೆಯ ವಿಧಿಯು ಅತ್ಯಂತ ಪ್ರಮುಖವಾದುದು. ಏಕೆಂದರೆ ಅದು

(A) ಅಸ್ಪೃಶ್ಯತೆಯನ್ನು ನಿಷೇಧಿಸುತ್ತದೆ

(B) 14 ವರ್ಷದವರೆಗಿನ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಹಕ್ಕನ್ನು ನೀಡಿದೆ

(C) ವರದಕ್ಷಿಣೆ ಪದ್ಧತಿಯನ್ನು ನಿಷೇಧಿಸುತ್ತದೆ


(D) 14 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳ ದುಡಿಮೆಯನ್ನು ನಿಷೇಧಿಸುತ್ತದೆ

6. ಏಪ್ರಿಲ್ – ಮೇ ತಿಂಗಳುಗಳಲ್ಲಿ ದ್ವಿದಳ ಧಾನ್ಯ ಮತ್ತು ತರಕಾರಿಗಳನ್ನು ಬೆಳೆಸುವುದು ಈ ಬಗೆಯ ಬೇಸಾಯಕ್ಕೆ ಉತ್ತಮ ಉದಾಹರಣೆಯಾಗಿದೆ

(A) ಮುಂಗಾರು ಬೇಸಾಯ (B) ಹಿಂಗಾರು ಬೇಸಾಯ

(C) ಜೇಡ್ ಬೇಸಾಯ (D) ಜೀವನಾಧಾರ ಬೇಸಾಯ

7. ಈ ಕೆಳಗಿನ ನಕ್ಷೆಯಲ್ಲಿ ಗುರುತಿಸಿರುವ ಸ್ಥಳಗಳ ಸರಿಯಾದ ಹೊಂದಾಣಿಕೆಯನ್ನು ಕೊಟ್ಟಿರುವ ಸಂಕೇತಗಳಿಂದ ಆರಿಸಿ ಬರೆಯಿರಿ :



(A) a — ಕೋಲ್ಕತ್ತ, b — ಸೂರತ್, c — ವಿಶಾಖಪಟ್ಟಣ

(B) a — ಸೂರತ್, b — ಕೋಲ್ಕತ್ತ, c — ವಿಶಾಖಪಟ್ಟಣ

(C) a — ವಿಶಾಖಪಟ್ಟಣ, b — ಸೂರತ್, c — ಕೋಲ್ಕತ್ತ

(D) a — ಕೋಲ್ಕತ್ತ, b — ವಿಶಾಖಪಟ್ಟಣ, c — ಸೂರತ್

8. ಭಾರತದಲ್ಲಿ ಪಂಚವಾರ್ಷಿಕ ಯೋಜನೆಗಳಿಗೆ ಅನುಮೋದನೆ ನೀಡುವ ಪ್ರಾಧಿಕಾರವೆಂದರ

(A) ರಾಷ್ಟ್ರೀಯ ಯೋಜನಾ ಆಯೋಗ

(B) ಕೇಂದ್ರ ಹಣಕಾಸು ಇಲಾಖೆ

(C) ರಾಷ್ಟ್ರೀಯ ಅಭಿವೃದ್ಧಿ ಮಂಡಳಿ

(D) ಭಾರತೀಯ ರಿಸರ್ವ್ ಬ್ಯಾಂಕ್

9. ವ್ಯಕ್ತಿಯೊಬ್ಬನು ಭವಿಷ್ಯತ್ತಿನಲ್ಲಿ ಕಾರು ಖರೀದಿಸಲು ಪ್ರತಿ ತಿಂಗಳು ನಿಯಮಿತವಾಗಿ ಉಳಿತಾಯ ಮಾಡಲು ಈ ಬ್ಯಾಂಕ್ ಖಾತೆಯನ್ನು ತೆರೆಯಬೇಕು

   (A) ಉಳಿತಾಯ ಖಾತೆ

   (B) ಚಾಲ್ತಿ ಖಾತೆ

   (C) ಆವರ್ತ ಠೇವಣಿ ಖಾತೆ

   (D) ನಿಶ್ಚಿತ ಠೇವಣಿ ಖಾತೆ

10. ಈ ಕೆಳಗಿನವುಗಳಲ್ಲಿ 'NASDAQ' ನಲ್ಲಿ ನೋಂದಾಯಿತಗೊಂಡ ಭಾರತದ ಪ್ರಪ್ರಥಮ ತಂತ್ರಜ್ಞಾನ ಸಂಸ್ಥೆಯನ್ನು ಗುರುತಿಸಿ

   (A) ರಿಲಯನ್ಸ್

   (B) ಇನ್‌ಫೋಸಿಸ್

   (C) ವಿಪ್ರೋ

   (D) ಬಯೋಕಾನ್

II. ಈ ಕೆಳಗಿನ ಪ್ರಶ್ನೆಗಳಿಗೆ ***ಒಂದೊಂದು*** ವಾಕ್ಯದಲ್ಲಿ ಉತ್ತರ ಬರೆಯಿರಿ : $14 \times 1 = 14$

11. ಭಾರತೀಯ ಇತಿಹಾಸಕಾರರು ಮೌಖಿಕ ಆಕರಗಳಿಗೆ ಮಹತ್ವ ನೀಡಲು ಕಾರಣವೇನು ?

12. ಖಾಲ್ಸಾ ಸೈನಿಕರು ಬ್ರಿಟಿಷರ ವಿರುದ್ಧ ದಂಗೆ ಏಳಲು ಕಾರಣವೇನು ?

13. ಭಾರತದ ಪ್ರದೇಶವೊಂದರ ಮೇಲೆ ಸುದೀರ್ಘ ಅವಧಿಯವರೆಗೆ ಆಳ್ವಿಕೆ ನಡೆಸಿದ ಯುರೋಪಿಯನ್ ದೇಶ ಯಾವುದು ?

14. ಕರ್ನಾಟಕ ಸರ್ಕಾರವು ಗ್ರಾಮಾಂತರ ಮಹಿಳೆಯರ ವಿಕಾಸಕ್ಕೆ ರೂಪಿಸಿರುವ ಕಾರ್ಯಕ್ರಮ ಯಾವುದು ?

15. 'ವಿಶ್ವಸಂಸ್ಥೆ' ಎಂಬ ಪದವನ್ನು ಮೊದಲ ಬಾರಿಗೆ ಚಾಲ್ತಿಗೆ ತಂದವರು ಯಾರು ?

16. ಸಾಮಾಜಿಕ ಸ್ತರ ವಿನ್ಯಾಸ ಎಂದರೇನು ?

17. ಬಾಲಕಾರ್ಮಿಕರು ಎಂದರೆ ಯಾರು ?

18. ದೇಶದೆಲ್ಲೆಡೆ ಮಳೆ ಬಂದರೂ ತಮಿಳುನಾಡಿಗೆ ಮಾತ್ರ ಮಳೆ ಬಾರದ ಋತು ಯಾವುದು ?

19. ಡೆಕ್ಕನ್ ಟ್ರಾಪ್ ಪ್ರದೇಶದಲ್ಲಿ ಕಂಡುಬರುವ ಮಣ್ಣು ಯಾವುದು ?

20. ಇತ್ತೀಚೆಗೆ ನಮ್ಮ ಜಲಾಶಯಗಳ ನೀರು ಸಂಗ್ರಹಣಾ ಸಾಮರ್ಥ್ಯವು ಕಡಿಮೆಯಾಗುತ್ತಿದೆ. ಏಕೆ ?

21. ಜೀವನಾಧಾರ ಬೇಸಾಯ ಎಂದರೇನು ?

22. ಭಾರತದ 'ಹಸಿರು ಕ್ರಾಂತಿಯ ಪಿತಾಮಹ' ಎಂದು ಯಾರನ್ನು ಕರೆಯುತ್ತಾರೆ ?

23. ಪ್ರತ್ಯಕ್ಷ ತೆರಿಗೆಗಳು ಎಂದರೇನು ?

24. 'ಉದ್ಯಮಿಯು ದೇಶವೊಂದರ ಸಂಪತ್ತು'. ಹೇಗೆ ?

III. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ **ಎರಡು** ಅಥವಾ **ನಾಲ್ಕು** ವಾಕ್ಯಗಳಲ್ಲಿ ಉತ್ತರಿಸಿ : $25 \times 2 = 50$

25. 'ವೈಜ್ಞಾನಿಕ ಬೆಳವಣಿಗೆಯು ಸಮುದ್ರಯಾನಕ್ಕೆ ಕಾರಣ'. ಈ ಹೇಳಿಕೆಯನ್ನು ಸಮರ್ಥಿಸಿ.

26. ಶ್ರೀರಂಗಪಟ್ಟಣ ಒಪ್ಪಂದದ ಷರತ್ತುಗಳಾವುವು ?

27. ಭಾರತೀಯ ಸಮಾಜಕ್ಕೆ ಅನಿಬೆಸೆಂಟ್‌ರವರು ನೀಡಿದ ಕೊಡುಗೆಗಳೇನು ?

*ಅಥವಾ*

ಮುಸ್ಲಿಂ ಸಮಾಜಕ್ಕೆ ಸರ್ ಸೈಯ್ಯದ್ ಅಹಮ್ಮದ್ ಖಾನ್‌ರವರು ನೀಡಿದ ಕೊಡುಗೆಗಳೇನು ?

28. ರಷ್ಯಾದಲ್ಲಿ ಸ್ಟಾಲಿನ್ ತಂದ ಬದಲಾವಣೆಗಳೇನು ?

29. ಸಾಕ್ಷರತೆಯ ಮಟ್ಟವನ್ನು ಹೆಚ್ಚಿಸಲು ಸರ್ಕಾರವು ಕೈಗೊಂಡಿರುವ ಯಾವುದಾದರೂ ನಾಲ್ಕು ಕ್ರಮಗಳನ್ನು ಬರೆಯಿರಿ.

30. 'ಮಾನವ ಹಕ್ಕುಗಳ ಪ್ರತಿಪಾದನೆಯ ನಿಟ್ಟಿನಲ್ಲಿ ಭಾರತವು ನಿರಂತರ ಪ್ರಯತ್ನಗಳನ್ನು ನಡೆಸುತ್ತಿದೆ.' ಈ ಹೇಳಿಕೆಯನ್ನು ಸಮರ್ಥಿಸಿ.

31. ಮಹಿಳಾ ಸಬಲೀಕರಣದಲ್ಲಿ ಮಹಿಳಾ ಸ್ವ–ಸಹಾಯ ಸಮೂಹಗಳ ಪ್ರಾಮುಖ್ಯತೆಯನ್ನು ವಿವರಿಸಿ.

32. ಪರ್ಯಾಯ ಪ್ರಸ್ಥಭೂಮಿಯ ಆರ್ಥಿಕ ಮಹತ್ತ್ವವೇನು ?

33. ಭಾರತದಲ್ಲಿ ಕಂಡುಬರುವ ಯಾವುದಾದರೂ ನಾಲ್ಕು ಪ್ರಾಕೃತಿಕ ಸಸ್ಯವರ್ಗಗಳನ್ನು ಹೆಸರಿಸಿ.

34. ಶಕ್ತಿ ಸಂಪನ್ಮೂಲಗಳ ಕೊರತೆಯನ್ನು ನಿವಾರಿಸಲು ಕೈಗೊಳ್ಳಬಹುದಾದ ಪರಿಹಾರೋಪಾಯಗಳೇನು ?

35. ಭೌಗೋಳಿಕ ಮಾಹಿತಿ ವ್ಯವಸ್ಥೆ (ಜಿ.ಐ.ಎಸ್.)ಯ ಉಪಯೋಗಗಳೇನು ?

36. ಪ್ರವಾಹಗಳು ಉಂಟಾಗಲು ಕಾರಣಗಳೇನು ?

37. 'ತೀವ್ರಗತಿಯ ಜನಸಂಖ್ಯಾ ಬೆಳವಣಿಗೆಯು ದೇಶದ ಅಭಿವೃದ್ಧಿಗೆ ಮಾರಕವಾಗಿದೆ.' ಹೇಗೆ ?

38. ತಲಾ ಆದಾಯವು ಅಭಿವೃದ್ಧಿಯ ನೈಜ ಮಾಪಕವಾಗಲಾರದು. ಏಕೆ ?

39. ಜಾಗತೀಕರಣದ ಯಾವುದಾದರೂ ನಾಲ್ಕು ಲಕ್ಷಣಗಳನ್ನು ಪಟ್ಟಿ ಮಾಡಿ.

40. ಮುಂಬಯಿ ಕರ್ನಾಟಕದ ಪ್ರದೇಶಗಳು ಯಾವುವು ?

41. ಬಾಲಗಂಗಾಧರ ತಿಲಕರು ಪ್ರಕಟಿಸುತ್ತಿದ್ದ ಎರಡು ಪತ್ರಿಕೆಗಳನ್ನು ಹೆಸರಿಸಿ.

42. ಭಾರತದ ಸ್ವಾತಂತ್ರ್ಯಕ್ಕಾಗಿ ಗಾಂಧೀಜಿಯವರು ನಡೆಸಿದ ಯಾವುದಾದರೂ ಎರಡು ಪ್ರಮುಖ ಚಳುವಳಿಗಳನ್ನು ಹೆಸರಿಸಿ.

43. ಯಾವುದಾದರೂ ನಾಲ್ಕು ಪ್ರಾದೇಶಿಕ ಸಹಕಾರ ಸಂಸ್ಥೆಗಳನ್ನು ಪಟ್ಟಿ ಮಾಡಿ.

44. ಜನಾಂಗ ದ್ವೇಷ (ವರ್ಣಬೇಧ) ದ ವಿರುದ್ಧ ಹೋರಾಡಿದ ಮಹಾಪುರುಷರನ್ನು ಹೆಸರಿಸಿ.

45. ನಿರುದ್ಯೋಗದ ಪ್ರಕಾರಗಳು ಯಾವುವು ?

46. ಹಿಮಾಚಲ (ಮಧ್ಯ ಹಿಮಾಲಯ) ದ ಮೇಲೆ ಕಂಡುಬರುವ ಪ್ರಸಿದ್ಧ ಗಿರಿಧಾಮಗಳು ಯಾವುವು ?

47. ಭಾರತದಲ್ಲಿ ಕಂಡುಬರುವ ಪ್ರಮುಖ ಅಣು ಖನಿಜಗಳನ್ನು ಪಟ್ಟಿ ಮಾಡಿ.

48. ಮಾನವ ಅಭಿವೃದ್ಧಿಯ ಸೂಚಕಗಳು ಯಾವುವು ?

49. ಬ್ಯಾಂಕುಗಳಲ್ಲಿ ತೆರೆಯಬಹುದಾದ ವಿವಿಧ ಖಾತೆಗಳು ಯಾವುವು ?

IV. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ***ಆರರಿಂದ ಎಂಟು*** ವಾಕ್ಯಗಳಲ್ಲಿ ಉತ್ತರಿಸಿ : $6 \times 3 = 18$

50. 1857 ರ ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮವು ಮಹತ್ತರ ಬದಲಾವಣೆಗಳನ್ನು ಉಂಟು ಮಾಡಿತು. ವಿವರಿಸಿ.

***ಅಥವಾ***

ಸಾರಿಗೆ ಸಂಪರ್ಕ ಕ್ಷೇತ್ರಗಳ ಬೆಳವಣಿಗೆಯು ಭಾರತದ ಸ್ವಾತಂತ್ರ್ಯ ಚಳುವಳಿಗೆ ಸಹಾಯಕವಾಯಿತು. ವಿವರಿಸಿ.

51. ಭಾರತದ ವಿದೇಶಾಂಗ ನೀತಿಯ ಮೂಲಭೂತ ಅಂಶಗಳಾವುವು ?

***ಅಥವಾ***

ಅನ್ಯ ರಾಷ್ಟ್ರಗಳೊಡನೆ ಭಾರತಕ್ಕೆ ಉತ್ತಮ ಬಾಂಧವ್ಯ ಅವಶ್ಯಕ. ಏಕೆ ?

52. ಅಸ್ಪೃಶ್ಯತೆ ನಿವಾರಣೆ ಮಾಡಲು ಕೈಗೊಂಡ ಸಂವಿಧಾನಾತ್ಮಕ ಮತ್ತು ಶಾಸನಾತ್ಮಕ ಕ್ರಮಗಳಾವುವು ?

***ಅಥವಾ***

ಅಸಂಘಟಿತ ಕಾರ್ಮಿಕರು ಎದುರಿಸುತ್ತಿರುವ ಸಮಸ್ಯೆಗಳಾವುವು ?

53. ಭಾರತದ ಪೂರ್ವ ಕರಾವಳಿ ಮತ್ತು ಪಶ್ಚಿಮ ಕರಾವಳಿಯಲ್ಲಿ ಕಂಡುಬರುವ ಪ್ರಮುಖ ಬಂದರುಗಳನ್ನು ಪ್ರತ್ಯೇಕವಾಗಿ ಪಟ್ಟಿ ಮಾಡಿ.

**ಅಥವಾ**

ಕೈಗಾರಿಕೆಗಳ ಸ್ಥಾನೀಕರಣದ ಮೇಲೆ ಪ್ರಭಾವ ಬೀರುವ ಅಂಶಗಳು ಯಾವುವು ?

54. ಗಾಂಧೀಜಿಯವರ ಗ್ರಾಮ ಸ್ವರಾಜ್ಯದ ಪರಿಕಲ್ಪನೆಯನ್ನು ವಿಕೇಂದ್ರೀಕರಣದ ಹಿನ್ನೆಲೆಯಲ್ಲಿ ವಿವರಿಸಿ.

**ಅಥವಾ**

ಕೇಂದ್ರ ಸರ್ಕಾರದ ತೆರಿಗೆಯೇತರ ಆದಾಯದ ಮೂಲಗಳನ್ನು ತಿಳಿಸಿ.

55. ಬ್ಯಾಂಕ್ ನಿರ್ವಹಿಸುವ ಕಾರ್ಯಗಳಾವುವು ?

**ಅಥವಾ**

ವಿಮಾಪಾಲಿಸಿ ಪಡೆಯುವಾಗ ಅನುಸರಿಸಬೇಕಾದ ಕ್ರಮಗಳೇನು ?

V. ಈ ಕೆಳಗಿನ ಪ್ರಶ್ನೆಗೆ ***ಎಂಟರಿಂದ ಹತ್ತು*** ವಾಕ್ಯಗಳಲ್ಲಿ ಉತ್ತರಿಸಿ : 4

56. 'ನೆಹರೂರವರು ಸ್ವತಂತ್ರ ಭಾರತದ ಅಭಿವೃದ್ಧಿ ಯೋಜನೆಗಳ ರೂವಾರಿ'. ವಿವರಿಸಿ.

VI. 57. ಭಾರತದ ನಕ್ಷೆಯನ್ನು ಬರೆದು, ಅದರಲ್ಲಿ ಈ ಕೆಳಗಿನವುಗಳನ್ನು ಗುರುತಿಸಿ : $1 + 3 = 4$

a) $82\frac{1}{2}^{\circ}$ ಪೂರ್ವ ರೇಖಾಂಶ

b) ಭಾಕ್ರಾ ನಂಗಲ್

c) ನರ್ಮದಾ ಕಣಿವೆ ಯೋಜನೆ

***ದೃಷ್ಟಿ ವಿಕಲಚೇತನ ವಿದ್ಯಾರ್ಥಿಗಳಿಗೆ ಪರ್ಯಾಯ ಪ್ರಶ್ನೆ : (ಪ್ರಶ್ನೆ ಸಂಖ್ಯೆ 57 ರ ಬದಲಿಗೆ)***

ಹಿಮಾಲಯ ಪರ್ವತಗಳಿಂದಾಗುವ ಪ್ರಯೋಜನಗಳಾವುವು ? 4